ಕಂಡು ತುಂಬಾ ಖುಷಿಯಾಯಿತು. ಕವಿಯ ಬಗ್ಗೆ ಕುತೂಹಲವೂ ಉಂಟಾಯಿತು. ನಂತರ ಪತ್ರಗಳನ್ನು ಬರೆಯತೊಡಗಿದೆ. ಪತ್ರಮುಖೇನ ಪರಿಚಯವಾಗಿದ್ದ ಕವಿಯನ್ನು ಮುಖತಃ ಭೇಟಿಯಾಗುವ ಅವಕಾಶ ಸಿಕ್ಕಿದ್ದು, ಅವರೊಂದಿಗೆ ಎರಡು ಮೂರು ದಿನ ಗಂಗೋತ್ರಿ ಕ್ಯಾಂಟೀನ್‌ನಲ್ಲಿ ಕಾಫಿ ಕುಡಿದು ಹರಟಿದ್ದು, ನನ್ನ ಲೂನಾದಲ್ಲಿ ಅವರನ್ನು ಡ್ರಾಪ್ ಮಾಡಿದ್ದು... ಒಂದು ರೀತಿಯ ಧನ್ಯತೆಯ ನೆನಪುಗಳು.

ಜಯಂತ್ ಮಹಾಪಾತ್ರ ತಾವು ಬದುಕುತ್ತಿರುವ ಸ್ಥಳ, ಅಲ್ಲಿಯ ಜನ, ಅವರ ಸಂಪ್ರದಾಯ, ನಡೆ-ನುಡಿಗಳ ಬಗ್ಗೆ, ಸಮಾಜದ ಆಗುಹೋಗುಗಳ ಬಗ್ಗೆ, ಪರಿಸರದ ಬಗ್ಗೆ, ಸ್ಥಳೀಯ ಪ್ರಕೃತಿಯ ಬಗ್ಗೆ ಅತ್ಯಂತ ಆಪ್ತವಾಗಿಯೂ ನಿಷ್ಠುರವಾಗಿಯೂ ಪದ್ಯಗಳ ಮೂಲಕ ಸ್ಪಂದಿಸುವ ರೀತಿ ನನ್ನನ್ನು ಬಹಳವಾಗಿ ಆಕರ್ಷಿಸಿತು. ಮಹಾಪಾತ್ರರವರು ಮೂಲತಃ ಒರಿಯಾ ಭಾಷೆಯ ಕವಿ. ಹಾಗೆಯೇ ಭಾರತದ ಮೊದಲ ಇಂಗ್ಲಿಷ್ ಭಾಷೆಯ ಕವಿ ಎಂಬ ಕೀರ್ತಿಗೆ ಪಾತ್ರರಾದವರು. ಅಷ್ಟೇ ಅಲ್ಲ, ಸಾಹಿತ್ಯ ಅಕಾಡೆಮಿಯಿಂದ ಇಂಗ್ಲಿಷ್ ಸಾಹಿತ್ಯಕ್ಕೆ ಸಂದ ಮೊದಲ ಪ್ರಶಸ್ತಿಯನ್ನು ಪಡೆದವರು. 'ಚಂದ್ರಭಾಗ' ಎಂಬ ಪ್ರತಿಷ್ಠಿತ ಪತ್ರಿಕೆಯ ಸಂಪಾದಕರಾಗಿ ಅತ್ಯುತ್ತಮ ಬರಹಗಳ ಪ್ರಕಟಣೆಗೆ ಕಾರಣರಾದರು.

ಕಟಕ್‌ನಲ್ಲಿ ಹುಟ್ಟಿ ಬಾಲ್ಯವನ್ನು ಅಲ್ಲೇ ಕಳೆದವರು. 94 ವರ್ಷಗಳ ಸುದೀರ್ಘ ಬದುಕನ್ನು ಅಸ್ತಮಾದೊಂದಿಗೆ ಗುದ್ದಾಡುತ್ತಲೇ ಬದುಕಿದವರು. ಮಹಾಪಾತ್ರರವರು ಪಾಟ್ನ ವಿಶ್ವವಿದ್ಯಾನಿಲಯದಲ್ಲಿ ಎಂ.ಎಸ್ಸಿ. ಮಾಡಿ, ತಾನು ಓದಿದ ರೆವೆನ್ಷಾ ಕಾಲೇಜಿನಲ್ಲೇ ಕೆಲಸ ಮಾಡಿ, 1986ರಲ್ಲಿ ನಿವೃತ್ತರಾದರು. ತಮ್ಮ 21ನೇ ವಯಸ್ಸಿನಲ್ಲೇ ಸಣ್ಣಕಥೆಗಳನ್ನು ಬರೆಯಲು ಪ್ರಾರಂಭಿಸಿ, ನಂತರ ಪದ್ಯಕ್ಕೆ ಒಲಿದರು. 'ಪದ್ಯಕ್ಕೆ ಒಲಿದದ್ದು ಆಕಸ್ಮಿಕ' ಎನ್ನುತ್ತಿದ್ದ ಅವರು, ಗಮನಾರ್ಹವಾದ ಪದ್ಯಗಳನ್ನು ಬರೆದಿದ್ದೇನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.

ಪತ್ರಿಕೆಗಳಿಗೆ ಬಿಡಿ ಬಿಡಿ ಪದ್ಯಗಳ ಬದಲು, ಮೊದಲಿಗೆ ನಾಲ್ಕು ಪದ್ಯಗಳ ಒಂದು ಗುಚ್ಛವನ್ನು, ಆನಂತರ ಏಳುಪದ್ಯಗಳ ಗುಚ್ಛವನ್ನು ಪತ್ರಿಕೆಗಳಿಗೆ ಕಳುಹಿಸಿದರಂತೆ. 'ಪತ್ರಿಕೆ ಅವುಗಳನ್ನು ಒಟ್ಟಿಗೆ ಪ್ರಕಟಿಸಿದ್ದು ನನಗೊಂಥರ ಹುಮ್ಮಸ್ಸು, ಪ್ರೇರಣೆ ದೊರಕಿ ಪದ್ಯ ಬರೆಯಲು ಮತ್ತಷ್ಟು ಉತ್ತೇಜನ



ಸಿಕ್ಕಿತು' ಎನ್ನುತ್ತಿದ್ದರು. ವಿದೇಶಿ ಪತ್ರಿಕೆಗಳು ಕೂಡ ಅವರ ಪದ್ಯಗಳನ್ನು ಪ್ರಕಟಿಸಿದಾಗ, 'ನಾನು ಚೆನ್ನಾಗಿ ಪದ್ಯ ಬರೆಯುತ್ತೇನೆಂದು ನನಗೆ ಗೊತ್ತಿತ್ತು' ಎಂಬ ಮಾತುಗಳಲ್ಲಿ ಅವರ ಆತ್ಮವಿಶ್ವಾಸವನ್ನು ಕಾಣಬಹುದಿತ್ತು. ತಮ್ಮ ಆತ್ಮಸಾಕ್ಷಿ ನುಡಿಯುವ ಸತ್ಯಕ್ಕೆ ಬದ್ಧರಾಗಿ ಬರೆಯುತ್ತಿದ್ದರು. ಬಂಧನವಿಲ್ಲದ ಸ್ವಾತಂತ್ರ್ಯವನ್ನು ಬಯಸುತ್ತಿದ್ದ ಈ ಕವಿ ಸದರಿ ವ್ಯವಸ್ಥೆಯ ಬಗ್ಗ ತೀರಾ ಅಸಂತುಷ್ಟರಾಗಿದ್ದರು. ಸಾಮಾಜಿಕ ಅಸಮತೋಲನ, ಜನರ ನೋವು, ಬಡತನಗಳ ಬಗ್ಗೆ ಪ್ರಶ್ನೆ ಮಾಡುತ್ತ, 'ನಾವು ಸ್ವತಂತ್ರರೇ? ಸ್ವಾತಂತ್ರ್ಯವೆಂಬುದು ಕೇವಲ ಒಂದು ಸ್ಥಾನಮಾನವಲ್ಲ, ಅದನ್ನು ಮೀರಿದ್ದು' ಎನ್ನುತ್ತಿದ್ದರು. 'ನಾನು ಹಿಂದಿನ ತಲೆಮಾರಿನವನಾದರೂ, ಹೆಣ್ಣನ್ನು ಸ್ವತಂತ್ರ ವ್ಯಕ್ತಿಯನ್ನಾಗಿ ನೋಡಬಯಸುವೆ' ಎನ್ನುತ್ತಿದ್ದರು. ಸಾಂಪ್ರದಾಯಿಕ ವ್ಯವಸ್ಥೆಯ ಬಗ್ಗೆ ಸಿಡಿದೇಳುವ ಜಯಂತರು ಹೆಣ್ಣಿನ ಅಸ್ಮಿತೆಯನ್ನು ಕಾಪಾಡಲು ಯತ್ನಿಸುತ್ತಿದ್ದರು.

'ದ ಈಸ್ಟರ್ನ್ ಟೈಮ್ಸ್' ಎಂಬ ಪತ್ರಿಕೆಗೆ ಉಪಸಂಪಾದಕರಾಗಿ ಜಯಂತರು ಕಾರ್ಯ